# <u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ</u>

## <u>ಸಿ.ಸಿ. ನಂ. 711 / 2022</u>

ಸಿಡಬ್ಲ್ಯೂ- **12**
ಪಿಡಬ್ಲ್ಯೂ-**05**

<u>ದಿನಾಂಕಃ **03.05.2025.**</u>

ಸಾಕ್ಷಿಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ಹಾಗೂ ಕನ್ನಡ ಭಾಷೆ ಅರ್ಥ ಆಗುವುದಿಲ್ಲ ಆದ್ದರಿಂದ ಶ್ರೀ.ಪಿ.ಎಲ್.ಟಿ ವಕೀಲರನ್ನು ಭಾಷಾಂತರರನ್ನಾಗಿ ನೇಮಕ ಮಾಡಲಾಯಿತು.

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | |
|---|---|
| ಸಾಕ್ಷಿಯ ಹೆಸರುಃ | - ಅಶ್ರತ್ ಅಲಿ |
| ತಂದೆಯ/ಗಂಡನ ಹೆಸರುಃ | - ಹಜರತ್ ಅಲಿ ಮೆಕ್ರಾಣಿ |
| ವಯಸ್ಸುಃ | -? **24** ವರ್ಷ |
| ಉದ್ಯೋಗಃ | - ಕೂಲಿ ಕೆಲಸ. |
| ವಾಸಸ್ಥಳಃ | - ಸಿದ್ದಾರ್ಥ ನಗರ ರಾಜ್ಯಃ ಉತ್ತರ ಪ್ರದೇಶ. |

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ</u>

ಕಳೆದ ಮೂರು ವರ್ಷಗಳ ಹಿಂದೆ ಸಂಚಾರ ನಿಯಂತ್ರಣದ ಪೊಲೀಸರು ಫೋನ್ ಕರೆ ಮಾಡಿ ಅಪಘಾತದ ವಿಷಯವನ್ನು ನನಗೆ ತಿಳಿಸಿದ್ದರು. ನಂತರ ನಾನು ಹಾಗೂ ಚಾಸಾ-11 ರವರು ಕೂಡಿ ಯಾದಗಿರಿಗೆ ಬಂದಿದ್ದೇವು. ನಾವು ಬಂದ ನಂತರ ನನ್ನ ಮೃತ ಅಣ್ಣನಾದ ಇನ್ಸಾದ್ ಅಲಿ ದೇಹವು ಸರಕಾರಿ ಆಸ್ಪತ್ರೆಯಲ್ಲಿ ಇತ್ತು. ಅಪಘಾತವು ಯಾವ ವಾಹನಗಳ ಮಧ್ಯ ಆಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಅಪಘಾತವು ಹೇಗೆ ಆಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಲಾರಿಯ ಚಾಲಕನ ಹೆಸರು ಮತ್ತು ಅದರ ನಂಬರ ಇವುಗಳ ವಿಷಯವನ್ನು ಪೊಲೀಸರಿಗೆ ತಿಳಿಸಿ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಸ.ಸ.ಅ ರವರಿಂದಃ</u>

ಅಪಘಾತ ಆಗುವುದಕ್ಕಿಂತ ಮುಂಚೆ ದಿನಾಂಕಃ 09.04.2022 ರಾತ್ರಿ ನನ್ನ ಅಣ್ಣ ಇನ್ಸದ್ ಅಲಿ ನನ್ನ ತಂದೆಗೆ ಪೋನ್ ಮಾಡಿ ನನ್ನ ಅಣ್ಣನಿಗೆ ಹೈದ್ರಬಾದ್ ಟ್ರೇನ್ ಸಿಕ್ಕಿರುವುದಿಲ್ಲ ಆದ್ದರಿಂದ ಆತನು ಯಾದಗಿರಿಗೆ ಹೋಗಿ ಅಲ್ಲಿಂದ ಹೈದ್ರಬಾದ್ ಗೆ ಬಂದು ಊರಿಗೆ ಬರುತ್ತೇನೆ ಎಂದು ತಿಳಿಸಿದ್ದನ್ನು ಎಂದರೆ ಸರಿಯಲ್ಲ. ಯಾದಗಿರಿ - ವಾಡಿ ಮುಖ್ಯ ರಸ್ತೆಯ ಮೇಲೆ ವೆಂಕಟೇಶ ನಗರ ತಾಂಡಾದ ಹತ್ತಿರ ತಾಯಮ್ಮ ಗುಡಿ ಹತ್ತಿರ ಅಪಘಾತ ಆಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಆಟೋ ನಂಃ ಕೆಎ-33-ಬಿ-0947 ನೇದ್ದರಲ್ಲಿ ನನ್ನ ಅಣ್ಣನು ಪ್ರಯಾಣಿಸುತ್ತಿದ್ದನ್ನು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಲಾರಿ ನಂಃ ಎಂಹೆಚ್-42-ಟಿ-7338 ನೇದ್ದರ ಚಾಲಕನು ಲಾರಿನ್ನು ಅತೀ ವೇಗ ಮತ್ತು ಅಲಕ್ಷ್ಯತನದಿಂದ ಚಲಾಯಿಸಿ ಸದರಿ ಅಪಘಾತವನ್ನು ಮಾಡಿರುತ್ತಾನೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಲಾರಿ ಚಾಲಕನು ಶ್ಯಾಮ್ ಸುಂದರ ತಂದೆ ವಿಜಯ್ ಗಾವಡೇ ಇರುತ್ತಾನೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ದಿನಾಂಕಃ 11.04.2022 ರಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 9 ಎಂದು ಗುರುತಿಸಲಾಯಿತು. ನಿಪಿ 9 ರಂತೆ ಹೇಳಿಕೆಯನ್ನು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದರು ಸಹ ಆರೋಪಿತನಿಗೆ ಸಹಾಯ ಮಾಡಲು ನೀಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಬಿ.ಬಿ.ಕೆ. ರವರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.